# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ನಿಗಮ ಕಛೇರಿ, ನಂ 29,
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
2ನೇ ಹಂತ ವಿಜಯನಗರ
ಮೈಸೂರು–570017.
Website : www.cescmysore.org
CIN : U40109KA2004SGC035177

ಸಹಾಯಕ ಕಾರ್ಯ ನಿರ್ವಾಹಕಇಂಜಿನಿಯರ್(ವಿ),
ನ.ರಾ.ಮೊಹಲ್ಲಾ, ಉಪ–ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ಕಛೇರಿ ಸಂಖ್ಯೆ : 0821–2456201
ಮೊಬೈಲ್ : 9448994742

ಕ್ರಮ.ಸಂಖ್ಯೆ :ಸಕಾಇಂ(ವಿ)/ಸಇಂ(ತಾ)/ನರಾಮೊ/18-19/ 4789-95 ದಿನಾಂಕ : 05.01.2019
7

ಲಗತ್ತು :

## ಜನ ಸಂಪರ್ಕ ಸಭೆ ನಡಾವಳಿ

ದಿನಾಂಕ 04.01.2019 ರಂದು ಸಂಜೆ 03.00 ಗಂಟೆಗೆ **ಕಾರ್ಯನಿರ್ವಾಹಕ ಇಂಜಿನಿಯರ್** (ವಿ) ಕಾ ಮತ್ತು ಪಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಎನ್.ಆರ್.ಮೊಹಲ್ಲಾ ಉಪ–ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

1. ಶ್ರೀ. ಮುಜ್ಹಾಮಿಲ್ ಖಾನ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾವಿಸನಿನಿ, ಕಾ ಮತ್ತು ಪಾ ವೃತ್ತ,
2. ಶ್ರೀ ಎಹಸಾನ್ ಉಲ್ಲ್ ಹಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ಉಪವಿಭಾಗ.
3. ಶ್ರೀಮತಿ, ಹೇಮಾವತಿ. ಎಂ.ಕೆ, ಸಹಾಯಕ ಇಂಜಿನಿಯರ್(ತಾಂ),ಎನ್.ಆರ್.ಮೊಹಲ್ಲಾ ಉಪವಿಭಾಗ.
4. ಶ್ರೀ ವಿಶ್ವಾಸ್, ಸಹಾಯಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
5. ಶ್ರೀ ವಿನೋದ್ ಕುಮಾರ್, ಸಹಾಯಕ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
6. ಶ್ರೀ ವೈ.ಸಿ.ನಿತೇಶ್, ಸಹಾಯಕ ಇಂಜಿನಿಯರ್(ವಿ), ಸಿದ್ದಲಿಂಗಪುರ ಶಾಖೆ
7. ಶ್ರೀಮತಿ ಸುನೀತ, ಕಿರಿಯ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
8. ಶ್ರಿ ರಾಚಯ್ಯ, ಕಿರಿಯ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
9. ಶ್ರೀಮತಿ ಬಿ.ಆರ್.ನಾಗರತ್ನ, ಹಿರಿಯ ಸಹಾಯಕರು ,ಎನ್.ಆರ್.ಮೊಹಲ್ಲಾ ಉಪವಿಭಾಗ.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಕಛೇರಿ ರವರು ಸಭೆಗೆ ಹಾಜರಿದ್ದ ಅಧಿಕಾರಿ/ ನೌಕರರು ಮತ್ತು ವಿದ್ಯುತ್ ಗ್ರಾಹಕರುಗಳನ್ನು ಸಭೆಗೆ ಸ್ವಾಗತಿಸಿದರು.

**ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.**

1. ಶ್ರೀ ವಿಜೇಂದ್ರ ರೈತ ಸಂಘದ ಕಾರ್ಯದರ್ಶಿ, ಕಳಸ್ತವಾಡಿ ರವರ ಸ್ಥಾವರ ಸಂಖ್ಯೆ ಎನ್.ಎಸ್.ಎಲ್42382 ಸ್ಥಾವರದಲ್ಲಿ ಬಳಕೆ ಕಡಿಮೆ ಇದ್ದರು ಬಿ.ಎಂ.ಡಿ ಅಧಿಕವಾಗಿದ್ದು, ವಿದ್ಯುತ್ ಬಿಲ್ ಹೆಚ್ಚಾಗಿ ಬರುತ್ತಿದೆ ಎಂದು ದೂರು ನೀಡಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಸಂಬಂಧಪಟ್ಟ ಶಾಖಾಧಿಕಾರಿಯವರಿಗೆ ಸ್ಥಾವರವನ್ನು ಪರಿಶೀಲಿಸುವಂತೆ ಸೂಚಿಸಿದರು.

2. ಕಳಸ್ತವಾಡಿ – ನಾಗನಹಳ್ಳಿ ರಸ್ತೆ ಬಳಿ ಇರುವ ಕುಡಿಯುವ ನೀರಿಗೆ ಒದಗಿಸಿರುವ ಪರಿವರ್ತಕವನ್ನು ಸೂಕ್ತ ಸ್ಥಳಕ್ಕೆ ವರ್ಗಾವಣೆ ಮಾಡಲುಕೋರಿದ್ದು, ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆಯುವ ಮುನ್ಸೂಚನೆಗಳು ಇದ್ದು ಇದಕ್ಕೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಖುದ್ದಾಗಿ ಸ್ಥಳ ಪರಿಶೀಲಿಸಿ, ಸಿದ್ದಲಿಂಗಪುರ ಶಾಖಾಧಿಕಾರಿ ಯವರಿಗೆ ಅಂದಾಜು ಪಟ್ಟಿಯನ್ನು ತಯಾರಿಸಲು ಸೂಚಿಸಿದರು.

3. ಎಲ್.ಇ.ಡಿ ಬಲ್ಪ್ ಮತ್ತು ಸೋಲಾರ್ ಉಪಕರಣ ಬಳಕೆಗಳಿಂದ ವಿದ್ಯುತ್ ಕಂಪನಿಯಿಂದ ಸಿಗುವ ರಿಬೇಟ್‌ಗಳ ಬಗ್ಗೆ ಮಾಹಿತಿಯನ್ನು ಉಪವಿಭಾಗ/ಶಾಖಾ ಕಛೇರಿಯ ಆವರಣಗಳಲ್ಲಿ ಜಾಹಿರಾತಿನ ಫಲಕಗಳನ್ನು ಹಾಕಬೇಕೆಂದು, ಶ್ರೀ ವಿಜೇಂದ್ರ ರವರು ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಜಾಹೀರಾತಿನ ಫಲಕವನ್ನು ಅಳವಡಿಸಲು ಅಗತ್ಯ ಕ್ರಮಕೈಗೊಳ್ಳುವುದಾಗಿ ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

5/1/2019

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಎನ್.ಆರ್.ಮೊಹಲ್ಲಾ ಉಪ–ವಿಭಾಗ
ಚಾ.ವಿ.ಸ.ನಿ.ನಿ. ಮೈಸೂರು.

ಪ್ರತಿಗಳು:–

- ಮುಖ್ಯಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕಇಂಜಿನಿಯರ್ (ವಿ),ಚಾವಿಸನಿನಿ., ಎನ್.ಆರ್.ಮೊಹಲ್ಲಾ, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು, ಎನ್.ಆರ್.ಮೊಹಲ್ಲಾ/ಬನ್ನಿಮಂಟಪ/ಸಿದ್ದಲಿಂಗಪುರ, ರವರುಗಳು ಮೇಲ್ಕಂಡ ದೂರಗಳನ್ವಯ ಸ್ಥಳಪರಿಶೀಲಿಸಿ ಉಪವಿಭಾಗ ಕಛೇರಿಗೆ ವರದಿ ನೀಡುವುದು. Act
- ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.